4 ದಿನಗಳ ಕೃಷಿ ಮೇಳಕ್ಕೆ ತೆರೆ | 17 ಲಕ್ಷ ಮಂದಿ ಭೇಟಿ

ಕೃಷಿ ಮೇಳದಲ್ಲಿ ಜನಸಾಗರ

ಬೆಂಗಳೂರು: ಕೃಷಿ ವಿಶ್ವವಿದ್ಯಾಲಯ ವತಿಯಿಂದ ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ)ದ ಆವರಣದಲ್ಲಿ ನ.3 ರಿಂದ 6ರವರೆಗೂ ಕೃಷಿಯಲ್ಲಿ ನವೋದ್ಯಮಗಳು ಘೋಷವಾಕ್ಯದಡಿ ಅದ್ಧೂರಿಯಾಗಿ ನಡೆದ ಜನರ ಮೆಚ್ಚುಗೆಗೆ ಪಾತ್ರವಾಗಿದೆ.

ಒಟ್ಟು ನಾಲ್ಕು ದಿನದ ಈ ಮೇಳ ಮತ್ತು ಕೃಷಿ ವಸ್ತು ಪ್ರದರ್ಶನ ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು, ಬೃಹತ್ ಹಾಗೂ ಸಣ್ಣ ಗಾತ್ರ ಕೃಷಿ ಯಂತ್ರೋಪಕರಣ ತಯಾರಕ, ಪಶುಸಂಗೋಪನೆ, ಮೀನುಗಾರಿಕೆ, ಗ್ರಾಮೀಣಾಭಿವೃದ್ಧಿ, ರೇಷ್ಮೆ, ಜಲಾನಯನ ಅಭಿವೃದ್ಧಿ ಸಂಸ್ಥೆಗಳು ಭಾಗವಹಿಸಿದ್ದವು. ಕೃಷಿಮೇಳದಲ್ಲಿ ಹೊಸ ಆವಿಷ್ಕಾರಗಳ ಪ್ರದರ್ಶನ, ಜನರಿಗೆ ಕೃಷಿ ಹಾಗೂ ಹೂ ಕೃಷಿಯ ಚಟುವಟಿಕೆಗಳ ಮಾಹಿತಿ ಲಭ್ಯವಾಯಿತು. ಇತ್ತೀಚಿನ ವರ್ಷಗಳಲ್ಲಿ ಸರ್ಕಾರದ ಪ್ರೋತ್ಸಾಹ ಪಡೆದು ಪ್ರಗತಿ ಹೊಂದಿದ ಚಟುವಟಿಕೆ, ಸಬ್ಸಿಡಿ, ಸಾಲಯೋಜನೆ, ಸರ್ಕಾರದ ಸವಲತ್ತುಗಳು ಸೇರಿದಂತೆ ಹಲವು ವಿಚಾರಗಳ ಅರಿವಿಗೆ ಒಂದು ಸೂರಿನಡಿ ಪರಿಹಾರ ಒದಗಿಸಿತು. ಈ ನಾಲ್ಕು ದಿನಗಳ ಮೇಳದಲ್ಲಿ ಕಡೆಯ ಎರಡು ದಿನವಾದ ಶನಿವಾರ ಹಾಗೂ ಭಾನುವಾರದಂದು ಜನರು ಹೆಚ್ಚಾಗಿ ಭೇಟಿ ನೀಡಿದ್ದರು.



- 5 ವರ್ಷದಲ್ಲೇ ಈ ಬಾರಿ ಅಧಿಕ ಮಂದಿ ಭೇಟಿ
- ಅಂದಾಜು 9 ಕೋಟಿ ರೂ. ವಹಿವಾಟು

ಕಳೆದ 5 ವರ್ಷದಲ್ಲಿ ಈ ವರ್ಷ ರಾಜ್ಯಾದ್ಯಂತ ಜನರು ಅಧಿಕ ರೀತಿಯಲ್ಲಿ ಭಾಗವಹಿಸಿದ್ದು, ಸುಮಾರು 17.35 ಲಕ್ಷ ಜನರು ಆಗಮಿಸಿದ್ದರು. ಒಟ್ಟು 9 ಕೋಟಿ ವಹಿವಾಟಾಗಿದೆ ಹಾಗೂ ರಿಯಾಯಿತಿ ದರದಲ್ಲಿ 43,500 ಮಂದಿ ಮಧ್ಯಾಹ್ನದ ಊಟ ಸವಿದಿದ್ದಾರೆ. ಕಳೆದ ಬಾರಿಗಿಂತ ಈ ಬಾರಿ ಮೇಳದಲ್ಲಿ ರೈತರ ಆದಾಯ ದ್ವಿಗುಣಗೊಂಡಿದ್ದು, ವಿನೂತನ ತಂತ್ರಜ್ಞಾನ ಬಳಸಿಕೊಳ್ಳುವುದು, ಆಹಾರ ಧಾನ್ಯ, ತರಕಾರಿ ನೂತನ ಕೃಷಿ ಉತ್ಪನ್ನ, ತಳಿಗಳನ್ನು ಪರಿಚಯಿಸಿದೆ.

07-11-2022
Hoasadiganta Pg 01

ಇಂದಿನಿಂದ 1 ತಿಂಗಳು ಜಾನುವಾರುಗಳಿಗೆ ಉಚಿತ ಔಷಧ

ಕಾಲುಬಾಯಿ ರೋಗಕ್ಕೆ ಲಸಿಕೆ

ಬೆಂಗಳೂರು: ಜಾನುವಾರುಗಳ ಕಾಲುಬಾಯಿ ರೋಗ ನಿಯಂತ್ರಣಕ್ಕಾಗಿ ನ. 7ರಿಂದ ಡಿ. 7ರವರೆಗೆ ರಾಜ್ಯಾದ್ಯಂತ ಉಚಿತ ಲಸಿಕೆ ನೀಡಿಕೆ ಅಭಿಯಾನ ನಡೆಯಲಿದೆ. ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ್ ಈ ಮಾಹಿತಿ ನೀಡಿದ್ದು, ಜಾನುವಾರುಗಳಿಗೆ ಮಾರಣಾಂತಿಕ ಕಾಯಿಲೆಯಾಗಿರುವ ಕಾಲುಬಾಯಿ ರೋಗದ ನಿಯಂತ್ರಣಕ್ಕಾಗಿ ರಾಜ್ಯದಾದ್ಯಂತ ಇಂದಿನಿಂದ ಒಂದು ತಿಂಗಳ ಕಾಲ ಎಲ್ಲಾ ತಾಲೂಕುಗಳಲ್ಲಿ ಲಸಿಕೆ ಅಭಿಯಾನ ಜಾರಿಗೊಳಿಸಲಾಗುತ್ತಿದೆ. ಎಲ್ಲಾ ಜಾನುವಾರುಗಳಿಗೆ ಉಚಿತ ಲಸಿಕೆ ಹಾಕಲು ಉದ್ದೇಶಿಸಲಾಗಿದೆ ಎಂದಿದ್ದಾರೆ. ➡9



73.79 ಲಕ್ಷ ಡೋಸ್ ಲಸಿಕೆ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೇಂದ್ರ ಸರ್ಕಾರದೊಂದಿಗೆ ಮಾತುಕತೆ ನಡೆಸಿದ್ದು, ನಾನು ಕೂಡ ಕೇಂದ್ರ ಪಶುಸಂಗೋಪನಾ ಸಚಿವ ಪರುಷೋತ್ತಮ್ ರೂಪಾಲ್ ಅವರನ್ನು ಭೇಟಿ ಮಾಡಿ ಒಂದು ಕೋಟಿ ಲಸಿಕೆ ನೀಡುವಂತೆ ಮನವಿ ಮಾಡಿದ್ದೆ. ಇದಕ್ಕೆ ಸ್ಪಂದಿಸಿರುವ ಕೇಂದ್ರ ಸರ್ಕಾರವು ಕಾಲು ಬಾಯಿ ರೋಗದ ವಿರುದ್ಧ ಹೋರಾಡಲು ರಾಜ್ಯಕ್ಕೆ 73,79,250 ಲಸಿಕೆ ಕಳುಹಿಸಿಕೊಟ್ಟಿದೆ. ಇದನ್ನು ಎಲ್ಲಾ ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗಿದೆ. ➡9

07-11-2022
Hoasadiganta Pg 01

ಬೇಕಿಲ್ಲ ವರಿ ಲಾಭದ ಬೇಕರಿ!

ಲಾಭ ತರುವ ಉದ್ಯಮ
ಜಿಕೆವಿಕೆಯಲ್ಲಿ ತರಬೇತಿ

■ ಸತೀಶ್ ಕಂದಗಲ್‌ಪುರ ಬೆಂಗಳೂರು

ಉದ್ಯಮ ಆರಂಭಿಸಿದ ದಿನದಿಂದಲೇ ದುಡ್ಡು ಮಾಡಬಹುದಾದ ಉದ್ಯಮಗಳಲ್ಲಿ ಹೋಟೆಲ್, ಬೇಕರಿಗಳು ಮುಂಚೂಣಿಯಲ್ಲಿ ನಿಲ್ಲುತ್ತವೆ. ವೈವಿಧ್ಯಮಯ ರುಚಿ, ನೋಡಲು ಶುಚಿಯಾಗಿದ್ದರಂತೂ ಜನ ಎಷ್ಟೇ ದೂರವಿದ್ದರು ಹುಡುಕಿಕೊಂಡು ಬರುತ್ತಾರೆ. ಈ ಹಿನ್ನೆಲೆಯಲ್ಲಿ ಬೇಕರಿ ಉದ್ಯಮಕ್ಕೆ ಬೇಡಿಕೆ ಹೆಚ್ಚುತ್ತಿದ್ದು, ಸೂಕ್ತ ತರಬೇತಿ ಪಡೆದು ಉದ್ಯಮ ಆರಂಭಿಸಿದಲ್ಲಿ ಮಾಸಿಕ ಲಕ್ಷಾಂತರ ರೂ. ಆದಾಯ ಗಳಿಸಬಹುದು. ನವೋದ್ಯಮ ಸ್ಥಾಪನೆಗೆ (ಸ್ಟಾರ್ಟ್ ಅಪ್) ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಭಾರಿ ಪ್ರೋತ್ಸಾಹ ದೊರೆಯುತ್ತಿದೆ. ಆದರೆ, ದೇಶದಲ್ಲಿ ಶೇ.50ಕ್ಕೂ ಅಧಿಕ ದುಡಿಯಲು ಅರ್ಹರಾಗಿರುವ ಯುವಜನತೆ ಲಭ್ಯವಿದ್ದರೂ ಸೂಕ್ತ ಉದ್ಯೋಗ ಕೌಶಲ ಹೊಂದಿರುವವರ ಸಂಖ್ಯೆ ತುಂಬಾ ಗಣನೀಯವಾಗಿದೆ. ಹೀಗಾಗಿ, ಕೌಶಲಗಳನ್ನು ಕಲಿಸುವ ತರಬೇತಿ ಕೇಂದ್ರಗಳಿಗೆ ಇತ್ತೀಚೆಗೆ ಭಾರಿ ಬೇಡಿಕೆ ಬಂದಿದೆ. ಆದರಲ್ಲಿ ಸಾವಿರಾರು ಶಿಕ್ಷಣ ಸಂಸ್ಥೆಗಳು, ಖಾಸಗಿ ಸಂಸ್ಥೆಗಳು ಕೌಶಲ ತರಬೇತಿ ಕೊಡುವ ನಿಟ್ಟಿನಲ್ಲಿ ಲಕ್ಷಾಂತರ ರೂ. ಶುಲ್ಕ ಪಡೆದು ಅಭ್ಯರ್ಥಿಗಳ ಅಭ್ಯುದಯದ ಬದಲು ಸ್ವಯಂ ಅಭಿವೃದ್ಧಿಗೆ ಆದ್ಯತೆ ನೀಡುತ್ತಿವೆ. ಆದರೆ, ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಮತ್ತು ಆಹಾರ ಉದ್ಯಮಕ್ಕೆ ಬೆಂಬಲ ನೀಡುವ ಉದ್ದೇಶದಿಂದ 1968ರಿಂದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯಲ್ಲಿ (ಜಿಕೆವಿಕೆ) ಬೇಕರಿ ತರಬೇತಿ ನೀಡುತ್ತಿದೆ. ಇದಕ್ಕೆ ಕಳೆದ 15 ವರ್ಷಗಳಿಂದ ಹೆಚ್ಚಿನ ಬೇಡಿಕೆ ಬಂದಿದೆ.

ಯಾರ್ಯಾರಿಗೆ ಅನುಕೂಲ

ಕೃಷಿ ವಿಶ್ವವಿದ್ಯಾಲಯದ ಬೇಕರಿ ಉದ್ಯಮ ತರಬೇತಿಗೆ ಯುಎಸ್‌ಎ ನೇತೃತ್ವದ ಯುಎಸ್ ವೀಟ್ ಅಸೋಸಿಯೇಷನ್ ವತಿಯಿಂದ ಆರ್ಥಿಕ ನೆರವು ಲಭಿಸುತ್ತಿದೆ. ಉದ್ಯಮ ಶೀಲತೆ ಅಭಿವೃದ್ಧಿ ಮಾಡುವುದು ಮತ್ತು ಸ್ವಯಂ ಉದ್ಯೋಗ ಅವಕಾಶಗಳನ್ನು ಸೃಷ್ಟಿಸುವುದು ಮೂಲ ಉದ್ದೇಶವಾಗಿದೆ. ಇಲ್ಲಿ ಕಲಿಕೆ ಮೂಲಕ ಬೇಕರಿ ತರಬೇತಿ ನೀಡಲಾಗುತ್ತಿದ್ದು, ಅರೆ ಸ್ವಯಂ ಚಾಲಿತ ಯಂತ್ರೋಪಕರಣಗಳ ಬಳಕೆಯನ್ನೂ ಮಾಡಲಾಗುತ್ತದೆ. ಒಟ್ಟಾರೆ ಬೇಕರಿ ಉತ್ಪನ್ನಗಳ ತಯಾರಿಕೆ ತರಬೇತಿಯನ್ನು 16 ವರ್ಷ ಮೇಲ್ಪಟ್ಟವರು ಪಡೆಯಬಹುದು. ಮುಖ್ಯವಾಗಿ ಬೇಕರಿ ಉದ್ಯಮಿಗಳು, ಗೃಹಿಣಿಯರು, ಬೇಕರಿ ಮಾಲೀಕರು, ಯುವಕರು, ಮಹಿಳಾ ಸ್ವಯಂ ಸಂಘದ ಸದಸ್ಯರು, ಸಂಘ-ಸಂಸ್ಥೆಗಳ ಸದಸ್ಯರು ಈ ತರಬೇತಿ ಪಡೆದಲ್ಲಿ ಉದ್ಯಮ ಆರಂಭಕ್ಕೆ ಅನುಕೂಲ ಆಗಲಿದೆ.





ಕೃಷಿ ಮೇಳದಲ್ಲಿ ಸ್ಥಳದಲ್ಲಿಯೇ ತರಬೇತಿ

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 2022ನೇ ಕೃಷಿ ಮೇಳದಲ್ಲಿ ಮಕ್ಕಳು, ಗೃಹಿಣಿಯರಿಗೆ ನಿಂತ ಸ್ಥಳದಲ್ಲಿಯೇ ಬೇಕರಿ ಉತ್ಪನಗಳ ತಯಾರಿಸುವ ತರಬೇತಿ ನೀಡಲಾಗಿದೆ. ನಾಲ್ಕು ದಿನ ಪ್ರತಿ ಗಂಟೆಗೆ ಕನಿಷ್ಠ 40 ಜನರಂತೆ ಎರಡು ಯುನಿಟ್‌ಗಳಿಂದ 1600 ರಿಂದ 2 ಸಾವಿರ ಜನರಿಗೆ ತರಬೇತಿ ಕೊಡಲಾಗಿದೆ. ಜತೆಗೆ ಬೇಕರಿ ಉದ್ಯಮ ಬೇಕಾದ ಗಾಜಿನ ಶೋಕೇಷ್‌ಗಳು, ಲೈಟಿಂಗ್ಸ್, ಫ್ರಿಡ್ಜ್‌ಗಳನ್ನು ಒದಗಿಸುವ ಬಗ್ಗೆ ಮಾಹಿತಿ ನೀಡಲಾಯಿತು.

ಯಾವ್ಯಾವ ಉತ್ಪನ್ನ ತಯಾರಿಸಬಹುದು

ಬ್ರೆಡ್, ಬಿಸ್ಕತ್, ಕುಕೀಸ್, ಬನ್ಸ್, ಕೇಕ್‌ಗಳು, ಹಲ್ವಾ, ರಸ್ಕ್, ದಿಲ್‌ಪಸಂದ್, ಪಫ್ಸ್, ಚಾಕೋಲೇಟ್ ಉತ್ಪನ್ನಗಳು, ಕೇಕ್‌ಗಳ ಮೇಲೆ ಡಿಸೈನ್ ಮಾಡುವುದು, ಮೌಲ್ಯವರ್ಧಿತ ಆಹಾರ ತಯಾರಿಕೆಯಲ್ಲಿ ರಾಗಿ ಮಾಲ್ಟ್, ಚಕ್ಕುಲಿ, ಹುರಿಹಿಟ್ಟು, ಲಡ್ಡು, ಸಿರಿಧಾನ್ಯದ ಲಡ್ಡು, ಪಾಲಕ್ ಟೀಸ್ಟಿ ಬೈಟ್ಸ್, ಚಟ್ನಿಪುಡಿ, ಸಿರಧಾನ್ಯ ದೋಸೆ ಮಿಶ್ರಣ, ಅಂಬಲಿ ಮಿಶ್ರಣ, ವೀನಿಂಗ್, ಸಿರಿಧಾನ್ಯ ಮತ್ತು ರಾಗಿ ಸ್ವಿಪ್ಸ್ ಬಗ್ಗೆ ಕಲಿಸಲಾಗುತ್ತದೆ.



ವರ್ಷದ ಎಲ್ಲ ತಿಂಗಳ ಮೊದಲ ವಾರದಲ್ಲಿ 4 ವಾರದ ದೀರ್ಘಾವಧಿ ಬೇಕರಿ ಉತ್ಪನ್ನ ತರಬೇತಿ ಕೋರ್ಸ್ ಆರಂಭಿಸಿ, ವಾರ್ಷಿಕ 1200ಕ್ಕೂ ಅಧಿಕ ಜನರಿಗೆ ತರಬೇತಿ ನೀಡಲಾಗುತ್ತದೆ. ಈವರೆಗೆ 10 ಸಾವಿರಕ್ಕೂ ಅಧಿಕ ಜನರು ಬೇಕರು ಉದ್ಯಮ ಆರಂಭಿಸಿ ಯಶಸ್ವಿಯಾಗಿದ್ದಾರೆ.

| ಡಾ. ಸವಿತಾ ಎಸ್. ಮಂಗಾನವರ ಪ್ರಾಧ್ಯಾಪಕ

10 ಸಾವಿರ ಉದ್ಯಮಗಳು ಆರಂಭ

ಕೃಷಿ ವಿಶ್ವವಿದ್ಯಾಲಯದಿಂದ 2006ರಲ್ಲಿ ಉತ್ಪನ್ನಗಳ ತಯಾರಿಕೆ ಮತ್ತು ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ತಬೇತಿ ಆರಂಭಿಸಲಾಗಿದ್ದು, ಈ ತರಬೇತಿ ಕೇಂದ್ರ ಹೊಸ ರೂಪ ಪಡೆದಿದೆ. ಅಂದಿನಿಂದ ವಾರ್ಷಿಕ 1,200 ರಿಂದ 1,500 ಜನ ಬೇಕರಿ ಮತ್ತು ಮೌಲ್ಯವರ್ಧನೆ ತರಬೇತಿ ಪಡೆದುಕೊಂಡಿದ್ದಾರೆ. ಆವರಲ್ಲಿ ಈವರೆಗೆ 10 ಸಾವಿರಕ್ಕೂ ಅಧಿಕ ಜನ ಸ್ವಂತ ಉದ್ಯಮ ಆರಂಭಿಸಿ ಮಾಸಿಕ ಲಕ್ಷಾಂತರ ರೂ. ಆದಾಯ ಗಳಿಸುತ್ತಾ ಉತ್ತಮ ಜೀವನ ಕಟ್ಟಿಕೊಂಡಿದ್ದಾರೆ. ಇದರಲ್ಲಿ ಕರ್ನಾಟಕದ 20ಕ್ಕೂ ಅಧಿಕ ಜಿಲ್ಲೆಗಳ ಜನರು ಹಾಗೂ ತಮಿಳುನಾಡು, ಆಂಧ್ರಪ್ರದೇಶ, ಕೇರಳ, ಉತ್ತರ ಪ್ರದೇಶ, ಮಧ್ಯಪ್ರದೇಶ, ಅಸ್ಸಾಂ, ಬಿಹಾರ ಸೇರಿ ವಿವಿಧ ರಾಜ್ಯಗಳಿಂದ ಅಭ್ಯರ್ಥಿಗಳು ವಿಶ್ವವಿದ್ಯಾಲಯ ಜಾಲತಾಣದ ಮೂಲಕ ಸಂಪರ್ಕ ಸಾಧಿಸಿ, ತರಬೇತಿ ಪಡೆದು ಉದ್ಯಮ ಆರಂಭಿಸಿದ್ದಾರೆ. ಯಾವುದೇ ಚಿಕ್ಕ ಉದ್ಯಮದಲ್ಲಿ ಕಾರ್ಮಿಕರ ಮೇಲೆ ಅವಲಂಬನೆ ಆಗದೇ ಸ್ವತಃ ಉತ್ಪನ್ನಗಳನ್ನು ತಯಾರಿಸುವುರಿಂದ ಲಾಭದ ಪ್ರಮಾಣವೂ ಹೆಚ್ಚಾಗಿರುತ್ತದೆ ಎಂದು ತರಬೇತಿ ಕೇಂದ್ರದ ಸಹ ಪ್ರಾಧ್ಯಾಪಕಿ ಮಮತಾ ಮಾಹಿತಿ ನೀಡುತ್ತಾರೆ.

ಅತ್ಯಂತ ಕಡಿಮೆ ದರದಲ್ಲಿ ತರಬೇತಿ

ದೇಶದಲ್ಲಿ ಬೇಕರಿ ಉದ್ಯಮ ತರಬೇತಿ ಎಂದಾಕ್ಷಣ 3 ತಿಂಗಳ ಕೋರ್ಸ್‌ಗೆ ಕನಿಷ್ಠ 40 ಸಾವಿರ ರೂ.ನಿಂದ 1 ಲಕ್ಷ ರೂ. ಶುಲ್ಕ ಪಾವತಿಸಿಕೊಳ್ಳಲಾಗುತ್ತದೆ. ಆದರೆ, ಕೃಷಿ ವಿಶ್ವವಿದ್ಯಾಲಯದಿಂದ ಬೇಕರಿ ಉತ್ಪನ್ನಗಳ ತಯಾರಿಕೆ ತರಬೇತಿಯ ಅತ್ಯಂತ ದೀರ್ಘಾವಧಿ ಕೋರ್ಸ್‌ಗೆ (14 ವಾರ) ಕೇವಲ 7,500 ರೂ. ಶುಲ್ಕ ಪಡೆಯುತ್ತದೆ. ಈ ತರಬೇತಿ ಪಡೆದವರಿಗೆ ವಾಣಿಜ್ಯ ಉತ್ಪಾದನೆಗಾಗಿ ಉತ್ಪನ್ನಗಳ ತಯಾರಿಕೆ ಮತ್ತು ಮಾರಾಟಕ್ಕೆ ಪ್ರಮಾಣಪತ್ರವನ್ನೂ ನೀಡಲಾಗುತ್ತದೆ. ಇನ್ನು ಗೃಹಬಳಕೆ ಮತ್ತು ಸಣ್ಣ ಪ್ರಮಾಣದ ಉದ್ಯಮ ನಡೆಸಲು ಅನುಕೂಲ ಆಗುವಂತೆ ನೀಡಲಾಗುವ 4 ವಾರಗಳ ತರಬೇತಿಗೆ 2,000 ರೂ. ಶುಲ್ಕ ಪಡೆಯಲಾಗುತ್ತದೆ. ಇದಕ್ಕೂ ಪ್ರಮಾಣಪತ್ರವನ್ನು ನೀಡಲಾಗುತ್ತದೆ. ಉಳಿದಂತೆ 5 ದಿನ-750 ರೂ., 3 ದಿನ- 400 ರೂ. ಹಾಗೂ 2 ದಿನ-300 ರೂ. ಶುಲ್ಕ ಪಾವತಿಸಿಕೊಂಡು, ಕೇಕ್‌ಗಳು, ಹಾಲು-ಮೊಟ್ಟೆ ಉತ್ಪನ್ನಗಳು, ಮೌಲ್ಯವರ್ಧಿತ ರಾಗಿ ಉತ್ಪನ್ನಗಳು, ಸಿರಿಧಾನ್ಯ ಉತ್ಪನ್ನ, ಹಣ್ಣು-ತರಕಾರಿಗಳ ಸಂಸ್ಕರಣೆ, ಆಹಾರ ಪೋಷಣೆ, ನೆಲ್ಲಿಕಾಯಿ ಮೌಲ್ಯವರ್ಧನೆ, ಚಾಟ್ಸ್ ತಯಾರಿಕೆ, ಡಬ್ಬಿ ತಿನಿಸುಗಳ ತಯಾರಿಕೆ, ಜ್ಯೂಸ್ ಮಾಡುವುದು, ಬೆಂಕಿರಹಿತ ತಿನಿಸುಗಳನ್ನು ತಯಾರಿಸಲು ತರಬೇತಿ ನಿಡಲಾಗುತ್ತದೆ.

ಹೆಚ್ಚಿನ ಮಾಹಿತಿಗೆ

ಬೇಕರಿ ಮತ್ತು ಮೌಲ್ಯವರ್ಧನೆ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಹೆಬ್ಬಾಳ, ಬೆಂಗಳೂರು- 560024 ಇಲ್ಲಿ ನೇರವಾಗಿ ಭೇಟಿ ನೀಡಬಹುದು. ದೂ.080-23513370 ಕರೆ ಮಾಡಬಹುದು. ಅಥವಾ http://www.bakerytrainingunituasb.com/ ಜಾಲತಾಣಕ್ಕೆ ಭೇಟಿ ನೀಡಿ ಮಾಹಿತಿ ಪಡೆಯಬಹುದು.


ದ್ರಾಕ್ಷಿ ಚಪ್ಪರಕ್ಕೆ ಹಬ್ಬಿಸಿರುವ ಬಳ್ಳಿ ಆಲೂಗಡ್ಡೆ.

ಶಿಡ್ಲಘಟ್ಟದಲ್ಲಿ ಬಳ್ಳಿ ಆಲೂಗಡ್ಡೆ ಕಮಾಲ್

ಔಷಧೀಯ ಕಣಜ

ಬಳ್ಳಿ ಆಲೂಗಡ್ಡೆಗೂ ಇಲ್ಲಿನ ಆಲೂಗಡ್ಡೆಗೂ ಸಂಬಂಧವಿಲ್ಲ. ಬಳ್ಳಿ ಆಲೂಗಡ್ಡೆ, ಗಡ್ಡೆ ಗೆಣಸಿನ ಜಾತಿಗೆ ಸೇರಿರುವಂಥದ್ದು ಮತ್ತು ಸಾಮಾನ್ಯವಾಗಿ ಕಾಡುಗಳಲ್ಲಿ ಬೆಳೆಯುತ್ತದೆ. ಆದರೆ, ಇದು ಫೇಟ್ ಆಲೂಗಡ್ಡೆ ಹೋಲುವುದರಿಂದ ಬಳ್ಳಿ ಆಲೂಗಡ್ಡೆ ಅಥವಾ ಬಳ್ಳಿ ಬಟಾಟೆ ಎನ್ನುತ್ತಾರೆ. ಬಳ್ಳಿ ಆಲೂಗಡ್ಡೆಯಿಂದ ಮೊಣಕಾಲು ನೋವು ಅಥವಾ ವಾಯು ರೋಗ ಸಮಸ್ಯೆ ಬರುವುದಿಲ್ಲ. ಇದನ್ನು ಔಷಧೀಯ ಕಣಜವೆಂದು ಆದಿವಾಸಿಗಳು ಬಳಸುತ್ತಿದ್ದರು. ಆಲೂಗಡ್ಡೆ ಬಳಸಿ ನಾವು ಏನೆಲ್ಲ ತಿಂಡಿ ತಿನಿಸು ತಯಾರಿಸುತ್ತೇವೆಯೋ ಅದನ್ನೆಲ್ಲ ತಯಾರಿಸಬಹುದು ಎನ್ನುತ್ತಾರೆ ಸಹಜ ಸಮೃದ್ಧ ಸಾವಯವ ಕೃಷಿಕರ ಬಳಗದ ಮುಖ್ಯಸ್ಥ ಜಿ.ಕೃಷ್ಣಪ್ರಸಾದ್.

■ ಶಶಿಕುಮಾರ್ ಎ. ಶಿಡ್ಲಘಟ್ಟ

ಉತ್ತರ ಕನ್ನಡ ಜಿಲ್ಲೆಯ ಗಿರಿಜನರು ಬೆಳೆಯುವ ತರಕಾರಿಗಳಲ್ಲಿ ಒಂದಾದ ಬಳ್ಳಿ ಆಲೂಗಡ್ಡೆ ಇದೀಗ ಬಯಲು ಸೀಮೆಯ ಚಿಕ್ಕಬಳ್ಳಾಪುರ ಜಿಲ್ಲೆಗೂ ಕಾಲಿಟ್ಟಿದೆ.

ಶಿಡ್ಲಘಟ್ಟ ತಾಲೂಕಿನ ಆಪ್ಪೇಗೌಡನಹಳ್ಳಿಯ ರೈತ ಎ.ಎಂ. ತ್ಯಾಗರಾಜ್, ಸುಮಾರು ಹದಿನೈದು ಗುಂಟೆ ದ್ರಾಕ್ಷಿ ಚಪ್ಪರಕ್ಕೆ ಆಲೂಗಡ್ಡೆ ಬಳ್ಳಿ ಹಬ್ಬಿಸಿದ್ದಾರೆ. ಒಂದೊಂದು ಗಿಡದಲ್ಲಿಯೂ ಸುಮಾರು 350 ಗಡ್ಡೆಗಳು ಬಿಟ್ಟಿವೆ. ಒಂದೊಂದು ಗಡ್ಡೆಯೂ 250 ಗ್ರಾಂನಿಂದ ನಾಲ್ಕೈವರೆ ಕೆ.ಜಿ.ವರೆಗೂ ತೂಗುತ್ತವೆ.

ಬೇಸಾಯ ಕ್ರಮ: ತೋಟದಲ್ಲಿ ಬಳ್ಳಿ ಆಲೂಗಡ್ಡೆ ಬೆಳೆಯುವಾಗ ಸುಮಾರು ಎರಡು ಅಡಿ ಆಳ ಹಾಗೂ ಅಗಲದ ಗುಂಡಿ ತೋಡಿ ಗೊಬ್ಬರ, ಹಿಂಡಿ ಹಾಕಿ ಬೆಳೆ ನಾಟಿ ಮಾಡಬೇಕು. ಸಾಮಾನ್ಯವಾಗಿ ಡಿಸೆಂಬರ್ ನಂತರ ನಾಟಿ ಮಾಡಿದರೆ ಗಡ್ಡೆಗಳು ಚೆನ್ನಾಗಿ ಮೊಳಕೆಯೊಡೆಯುತ್ತವೆ. ಸುಮಾರು ಎರಡೂವರೆ ತಿಂಗಳ ನಂತರ ಕಾಯಿ ಬಿಡಲು ಆರಂಭವಾಗುತ್ತವೆ. ಬಳ್ಳಿ ಚೆನ್ನಾಗಿ ಹಬ್ಬಿದ ನಂತರ ಎಲೆಗೆ ಒಂದರಂತೆ ಕಾಯಿ ಬಿಡುತ್ತವೆ. ಈ ಬೆಳೆಯ ಬೇರುಗಳು ಹೆಚ್ಚಾಗಿ ಭೂಮಿಯ ಆಳಕ್ಕೆ ಹೋಗುವುದಿಲ್ಲ. ಹಾಗಾಗಿ ಮನೆ ಅಂಗಳದಲ್ಲಿಯೂ ಬೆಳೆಯಬಹುದು. ಇನ್ನು ಬಳ್ಳಿ ಆಲೂಗಡ್ಡೆ ಬೆಳೆಯಲು ಅಷ್ಟಾಗಿ ಖರ್ಚಾಗದು. ಗಡ್ಡೆ ನೆಡುವಾಗ ಹಾಗೂ ಬಳ್ಳಿಯಲ್ಲಿ ಗಡ್ಡೆ ಬೆಳೆಯಲು ಶುರುವಾದಾಗ ಗೊಬ್ಬರ ನೀಡಿದರೆ ಸಾಕು. ಉಳಿದಂತೆ ಇದಕ್ಕೆ ರಾಸಾಯನಿಕ, ಔಷಧ ಬಳಸುವ ಅಗತ್ಯವಿಲ್ಲ. ಒಂದು ವೇಳೆ ಬಳ್ಳಿಗೆ ಯಾವುದಾದರೂ ಹುಳು ಬಿದ್ದಲ್ಲಿ ಮಜ್ಜಿಗೆ ಮಿಶ್ರಿತ ನೀರು ಸಿಂಪಡಿಸಿದರೆ ಸಾಕು.

ಉತ್ತಮ ದರ: ಬಯಲುಸೀಮೆ ಭಾಗದ ಜನತೆಗೆ ಬಳ್ಳಿ ಆಲೂಗಡ್ಡೆ ಪರಿಚಯ ಅಷ್ಟಾಗಿ ಇಲ್ಲದಿರುವುದೂ ಸೇರಿ ಈ ಭಾಗದ ಆಲೂಗಡ್ಡೆ ದರ ಹಾಗೂ ಬಳ್ಳಿ ಆಲೂಗಡ್ಡೆ ದರದಲ್ಲಿ ಭಾರಿ ವ್ಯತ್ಯಾಸವಿದೆ. ಬಳ್ಳಿ ಆಲೂಗಡ್ಡೆ ಕೆಜಿಗೆ ಸುಮಾರು 200ರಿಂದ 250 ರೂ. ಇದ್ದರೆ, ಇಲ್ಲಿನ ಆಲೂಗಡ್ಡೆ ದರ 40-50 ರೂ. ಇದೆ.



ಮೈಸೂರಲ್ಲಿ ನಡೆದ ಗಡ್ಡೆಗೆಣಸು ಮೇಳದಲ್ಲಿ ಐದು ಕೆಜಿ ಬಳ್ಳಿ ಆಲೂಗಡ್ಡೆ ತಂದಿದ್ದೆ. ಇದನ್ನು ಕತ್ತರಿಸದೇ ನೆಡಬೇಕು. ಆರು ತಿಂಗಳ ಬೆಳೆಯಿದು. ಹೆಚ್ಚಿನ ಆರೈಕೆ ಬೇಡ. ಮುಂದಿನ ವರ್ಷಕ್ಕೆ ಪುನಃ ನೆಡುವ ಆಗತ್ಯವಿಲ್ಲ, ಭೂಮಿಯಲ್ಲಿರುವ ಗಡ್ಡೆಯೇ ಸಾಕು, ಮತ್ತೆ ಚಿಗುರುತ್ತದೆ. ಮನೆ ಅಂಗಳದ ಕೈ ತೋಟ, ತಾರಸಿಯಲ್ಲೂ ಬೆಳೆಯಬಹುದಾಗಿದೆ. ಈ ಬೆಳೆಯಲ್ಲಿ ಕುರುಕಲು ತಿಂಡಿ, ಸೂಪ್, ಕಾಳು ಪಲ್ಯ ಮಾಡಬಹುದು.

| ಎ.ಎಂ.ತ್ಯಾಗರಾಜ್ ಬಳ್ಳಿ ಆಲೂಗಡ್ಡೆ ಬೆಳೆಗಾರ

ಬಳ್ಳಿ ಆಲೂಗಡ್ಡೆ ಅಷ್ಟಾಗಿ ಮಾರುಕಟ್ಟೆಯಲ್ಲಿನ ತರಕಾರಿ ಅಂಗಡಿಗಳಲ್ಲಿ ಕಾಣುತ್ತಿಲ್ಲವಾದರೂ ತರಕಾರಿ ಪ್ರಿಯರ ಆಡುಗೆ ಮನೆಯ ನೆಚ್ಚಿನ ಕಾಯಿಪಲ್ಯವಿದು. ಕಾರ್ಬೋಹೈಡ್ರೇಟ್, ಪ್ರೊಟೀನ್ ಮತ್ತು ಕ್ಯಾಲ್ಸಿಯಂ ಸಮೃದ್ಧವಾಗಿದ್ದು, ಇದು ಸಕ್ಕರೆ ಕಾಯಿಲೆ ರೋಗಿಗಳಿಗೆ ಸೂಕ್ತ ಆಹಾರ. ಇತರ ತರಕಾರಿಗಳಂತೆ ನಿತ್ಯದ ಆಡುಗೆಯಲ್ಲಿ ಬಳ್ಳಿ ಆಲೂಗಡ್ಡೆ ಬಳಸಿದರೆ ಮೊಣಕಾಲು ನೋವು ನಿವಾರಣೆಯಾಗುತ್ತದೆ.

| ಡಾ.ವಿಜಯಕುಮಾರ್ ಆಯುರ್ವೇದ ವೈದ್ಯ

ಸಿಗದ ಸೂಕ್ತ ಮಾರುಕಟ್ಟೆ

ಸುಮಾರು 7000ರಿಂದ 800 ಕೆಜಿಯಷ್ಟು ಗಡ್ಡೆ ಬೆಳೆಯಲಾಗಿದೆ. ಈ ಭಾಗದಲ್ಲಿ ಇದರ ಬಗ್ಗೆ ಮಾಹಿತಿ ಹಾಗೂ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಇಲ್ಲದಿರುವುದರಿಂದ ತಾಲೂಕಿನ ವಿವಿಧ ಸರ್ಕಾರಿ ಶಾಲೆಗಳ ಆವರಣದಲ್ಲಿ ಹಾಗೂ ಆಸಕ್ತ ಯುವ ರೈತರಿಗೆ ಮಾಹಿತಿ ನೀಡಿದ್ದು, ಸುಮಾರು 50ಕ್ಕೂ ಹೆಚ್ಚು ರೈತರು ನೇರಿ ಹಲವಾರು ಶಿಕ್ಷಕರು ಶಾಲಾ ಆವರಣದಲ್ಲಿ ನಾಟಿ ಮಾಡಿದ್ದಾರೆ ಎನ್ನುತ್ತಾರೆ ಎ.ಎಂ.ತ್ಯಾಗರಾಜ್.



07-11-2022
Vijayavani Pg 06

Krishi Mela ends, attracts a record 17.35 lakh visitors

University's Director of Extension K. Narayana Gowda attributes the huge crowd to the interest being shown by urban people in agriculture


Visitors at the Krishi Mela at the Gandhi Krishi Vignan Kendra in Bengaluru. SUDHAKARA JAIN

The Hindu Bureau
BENGALURU

The four-day Krishi Mela of the University of Agricultural Sciences-Bengaluru which came to an end on Sunday, has attracted a total of 17.35 lakh visitors, which is the highest in the last five years. According to the university authorities, the mela drew a crowd of 6.14 lakh persons on Sunday.

The mela saw participation of 13.1 lakh people in 2018-19, 14.5 lakh in 2019-20, and 8.1 lakh in 2021-22. During 2020-21, only 200 visitors a day were allowed owing to the COVID-19 pandemic.

University's Director of Extension K. Narayana Gowda attributes the huge crowd to the interest being shown by urban people in agriculture. "This time, a large number of urbanites especially youth also visited the mela along with farmers. This is mainly because of the fact that urbanites, especially those who have roots in villages, were able to re-establish their contacts with their native areas during the pandemic period," he told *The Hindu*.

"In fact there are instances of some urban dwellers selling their property in cities to buy agricultural land," he says.

At the same time, he acknowledges that such a trend has increased the responsibility of the university as there is a dire need to provide timely scientific advise to such people and also handhold them.

Mr. Gowda feels that the number of visitors would have further increased if there were no rains during the mela.

Meanwhile the sales by various stalls put up too have seen a sharp increase with the mela recording a total business volume of ₹9.01 crore over four days.

The mela had showcased nearly 800 stalls put up by various government departments, NGOs, and private firms besides FPOs and co-operatives. This was in addition to the live demonstration plots that showcased latest technologies in various crops, cultivation methods and irrigation systems.

07-11-2022
Hindu Pg 04

ಬೆಳೆಗಾರರು ನಷ್ಟದ ಸುಳಿಯಲ್ಲಿ | ಬೆಲೆ ನಿಗದಿಗೆ ಸರಕಾರಕ್ಕೆ ಒತ್ತಾಯ ಸಾಧ್ಯತೆ

ತೆಂಗು, ಕೊಬ್ಬರಿ ದರ ಕುಸಿತ

■ **ಮಾಯಸಂದ್ರಸ್ವಾಮಿ** ತುರುವೇಕೆರೆ (ತುಮಕೂರು) vkswamy2020@gmail.com

■ **ರಾಘವೇಂದ್ರ ಮೇಗರವಳ್ಳಿ** ತೀರ್ಥಹಳ್ಳಿ (ಶಿವಮೊಗ್ಗ) mkrtth@gmail.com

ದರ ಕುಸಿತ ಮತ್ತು ರೋಗಬಾಧೆಯಿಂದ ಕೊಬ್ಬರಿ ಬೆಳೆಗಾರರು ಕಂಗಾಲಾಗಿದ್ದಾರೆ. ಇನ್ನೊಂದೆಡೆ, ಸಿಪ್ಪೆ ತೆಂಗಿನಕಾಯಿ ದರವೂ ಪಾತಾಳ ಕಾಣುತ್ತಿದೆ. ಹೀಗಾಗಿ ತೆಂಗು ಬೆಳೆಗಾರರು ನಷ್ಟದ ಸುಳಿಗೆ ಸಿಲುಕಿದ್ದಾರೆ.

2022ರ ಆರಂಭದಲ್ಲಿ ಕ್ವಿಂಟಾಲ್‌ಗೆ 18 ಸಾವಿರ ರೂ. ಗಡಿ ದಾಟಿದ್ದ ಕೊಬ್ಬರಿ ಬೆಲೆ ಈಗ 12 ಸಾವಿರ ರೂ. ಆಂಚಿಗೆ ಕುಸಿದಿದೆ. ದೀಪಾವಳಿ ವೇಳೆ ಚುರುಕಾಗಬೇಕಿದ್ದ ಕೊಬ್ಬರಿ ವಹಿವಾಟು ಮಂದಗತಿಯಲ್ಲಿ ಸಾಗಿದೆ. ಮಾರುಕಟ್ಟೆಯಲ್ಲಿ ಬೇಡಿಕೆ ಕುಸಿತವಾಗಿರುವುದರಿಂದ ರೈತರು ಕಂಗಾಲಾಗಿದ್ದಾರೆ.

ಇದಲ್ಲದೆ ಇತ್ತೀಚೆಗೆ ಸುರಿದ ಭಾರಿ ಮಳೆಯಿಂದ ತೆಂಗಿಗೆ ರೋಗಭಾದೆ ಹೆಚ್ಚಳವಾಗುವ ಆತಂಕ ಎದುರಾಗಿದೆ. ಸದ್ಯ ದಾಸ್ತಾನಿರುವ ಕೊಬ್ಬರಿಯ ಗುಣಮಟ್ಟ ಸರಿಯಿಲ್ಲ ಎಂಬ ನೆಪ ಹೇಳಿ ವರ್ತಕರು ಬೇಕಾಬಿಟ್ಟಿ ದರ ಹೇಳುತ್ತಿದ್ದಾರೆ. ಕೊಬ್ಬರಿಗೆ ವೈಜ್ಞಾನಿಕ ಬೆಲೆ ನಿಗದಿಪಡಿಸುವಂತೆ ಸರಕಾರವನ್ನು ಒತ್ತಾಯಿಸಲು ತೆಂಗು ಬೆಳೆಗಾರ ಮತ್ತ ಬೀದಿಗಳಿಯುವ ಅನಿವಾರ್ಯತೆ ಎದುರಾಗಿದೆ.

ಕಾಯಿಗಿಲ್ಲ ಧಾರಣೆ: ಅಡಕೆ ಜತೆಗೆ ಉಪಬೆಳೆಯಾಗಿ ತೀರ್ಥಹಳ್ಳಿ ಮತ್ತಿತರ ಮಲೆನಾಡು ಭಾಗದಲ್ಲಿ ಬೆಳೆದ ತೆಂಗು ಬೆಲೆಯು 2 ತಿಂಗಳಿನಿಂದೀಚೆಗೆ ಕುಸಿಯುತ್ತಲೇ ಇದೆ. ಸಿಪ್ಪೆ ತೆಂಗಿನಕಾಯಿಯನ್ನು ಆರೇಳು ರೂಪಾಯಿಗೆ ಕೊಡುವ ಸ್ಥಿತಿ ನಿರ್ಮಾಣವಾಗಿದೆ. ನವೆಂಬರ್‌ನಲ್ಲೂ ಮಳೆ ಸುರಿಯುತ್ತಿರುವ ಹಿನ್ನೆಲೆಯಲ್ಲಿ ಸಿಪ್ಪೆ ತೆಂಗಿನಕಾಯಿಯಲ್ಲಿ ನೀರು ಬೆಳೆಯತೊಡಗಿದೆ. ಇದು ಬೆಳೆ ಸಂರಕ್ಷಣೆಯೂ ಕಷ್ಟವಾಗಿದೆ. ಇದಲ್ಲದೆ ಕಾಂಡಕೊರಕ, ಕೊಳೆರೋಗ, ನುಸಿ ರೋಗ ಸೇರಿದಂತೆ ಅನೇಕ ರೀತಿಯ ಕಾಯಿಲೆಗಳು ತೆಂಗಿನ ಸಸಿ ಮತ್ತು ಮರದಲ್ಲಿ ಕಾಣಿಸುತ್ತಿರುವುದರಿಂದ ನಷ್ಟಕ್ಕೀಡಾದ ರೈತರು ತೆಂಗು ಬೆಳೆಯುತ್ತ ಆಸಕ್ತಿ ಕಳೆದುಕೊಂಡಿದ್ದಾರೆ.

ಮಲೆನಾಡು ಭಾಗದಲ್ಲಿ ಸಿಪ್ಪೆ ಸುಲಿದ ತೆಂಗಿನಕಾಯಿಯನ್ನು ಕೆ.ಜಿ ಲೆಕ್ಕದಲ್ಲಿ ದೊಡ್ಡ ಸಣ್ಣ ಮಧ್ಯಮ ಗಾತ್ರ ಎಂದು ವಿಂಗಡಿಸಿ ಖರೀದಿಸಲಾಗುತ್ತಿದೆ.



ವಿಶೇಷ

ಸಲ್ಲಿಕೆಯಾಗದ ನಷ್ಟದ ವರದಿ

ಇಲಾಖೆಗಳು ರೈತರಿಗೆ ಆಗಿರುವ ನಷ್ಟದ ಕುರಿತು ಸರಕಾರಕ್ಕೆ ವರದಿ ಸಲ್ಲಿಸಿಲ್ಲ, ಕುಸಿತಕ್ಕೆ ಕಾರಣವಾದ ಅಂಶಗಳನ್ನೂ ತಿಳಿಸುತ್ತಿಲ್ಲ. ರೈತರ ಹಿತ ಕಾಯಬೇಕಾದ ಎಪಿಎಂಸಿ ಮತ್ತಿತರೆ ಸಹಕಾರ ಸಂಸ್ಥೆಗಳು ಬೆಲೆ ಕುಸಿತದ ವಿರುದ್ಧ ಧ್ವನಿ ಎತ್ತಿಲ್ಲ ಎನ್ನುವುದು ರೈತರ ಆಕ್ರೋಶವಾಗಿದೆ.

ಕೊಬ್ಬರಿ ದರ (ಕ್ವಿಂಟಾಲ್‌ಗೆ)
2022ರ ಜನವರಿ 18,000 ರೂ.
2022ರ ನವೆಂಬರ್ 12,000 ರೂ.

ಸಿಪ್ಪೆ ತೆಂಗಿನಕಾಯಿ (1ಕ್ಕೆ)
2022ರ ಜುಲೈ 13 ರಿಂದ 13.50 ರೂ.
2022ರ ನವೆಂಬರ್ 6-7 ರೂ.

ಕೊಬ್ಬರಿಯನ್ನು ಮಾರುಕಟ್ಟೆಗೆ ಕೊಂಡೊಯ್ಯುವ ವೇಳೆ ರೈತರಿಗೆ ಕನಿಷ್ಠ 14 ಸಾವಿರ ರೂ. ಮೆಚ್ಚುವಾಗುತ್ತದೆ. ಉತ್ಪಾದನಾ ಮೆಚ್ಚದ ಜತೆಗೆ ಸಂಸ್ಕರಣೆ, ಸಾಗಣೆ ಮೆಚ್ಚವನ್ನೂ ಪರಿಗಣಿಸಿ ಸರಕಾರ ವೈಜ್ಞಾನಿಕ ಬೆಲೆ ನಿಗದಿಪಡಿಸಬೇಕು.

-ಎಸ್.ಆರ್.ಜಯರಾಮ್ ಅಧ್ಯಕ್ಷ, ತಾಲೂಕು ತೆಂಗು ಮತ್ತು ಅಡಿಕೆ ಬೆಳಗಾರರ ಸಂಘ, ತುರುವೇಕೆರೆ

ಮಾರುಕಟ್ಟೆಯಲ್ಲಿ ಸಿಪ್ಪೆ ತೆಂಗಿನಕಾಯಿ ಬೆಲೆ ಕುಸಿತ ಬಗ್ಗೆ ರೈತರು ಇಲಾಖೆ ಗಮನಕ್ಕೆ ತಂದಿದ್ದಾರೆ. ನಷ್ಟದ ಬಗ್ಗೆ ಸರಕಾರಕ್ಕೆ ಸೂಕ್ತ ವರದಿ ಸಲ್ಲಿಸಲಾಗುತ್ತದೆ.

-ಶಾಂತಿಲಾಲ್ ಗಾಂಧಿ ಹಿರಿಯ ತೋಟಗಾರಿಕಾ ಸಹಾಯಕ ನಿರ್ದೇಶಕರು, ತೀರ್ಥಹಳ್ಳಿ

ಮಾರುಕಟ್ಟೆಯಲ್ಲಿ ಗ್ರಾಹಕರಿಗೆ 1 ಕಾಯಿಗೆ 20ರಿಂದ 25 ರೂ. ವರೆಗೂ ಮಾರಾಟವಾಗುತ್ತಿದೆ. ಬೆಳೆಗಾರರಿಗೆ ಮಾತ್ರ ಒಳ್ಳೆಯ ಧಾರಣೆ ಸಿಗುತ್ತಿಲ್ಲ. ಇನ್ನು ತೋಟದಲ್ಲಿ ರೈತರಿಂದ ಎಳನೀರನ್ನು 15 ರೂ.ಗೆ ಖರೀದಿಸಿ ಮಾರುಕಟ್ಟೆಯಲ್ಲಿ 30 ರೂ.ಗೂ ಹೆಚ್ಚು ಮಾರಾಟ ಮಾಡಲಾಗುತ್ತಿದೆ.

07-11-2022
V-karnataka Pg 01